ಎನ್.ಜಿ.ಇ.ಎಫ್ ಕಾರ್ಖಾನೆ ಖಾಸಗೀಕರಣ.

1218(1134) ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) :— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರದ ಪ್ರತಿಷ್ಠಿತ ಎನ್.ಜಿ.ಇ.ಎಫ್ ಕಾರ್ಖಾನೆಯನ್ನು ಖಾಸಗೀಕರಣಗೊಳಿಸಲು ಉದ್ದೇಶಿಸಲಾಗಿದೆಯೆ;

ಆ) ಈಗ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಕಾರ್ಮಿಕರ ಸಂಖ್ಯೆ ಎಷ್ಟು; ಇವರಲ್ಲಿ, ಈಗಾಗಲೇ ಸ್ವಯಂನಿವೃತ್ತಿ ಪಡೆದಿರುವವರ ಸಂಖ್ಯೆ ಎಷ್ಟು;

ಇ) ಎನ್.ಜಿ.ಇ.ಎಫ್‌ಗೆ ಸೇರಿದ ಆಸ್ತಿಪಾಸ್ತಿಗಳನ್ನು (ಜಮೀನು) ಪರಭಾರೆ ಮಾಡಲಾಗಿದೆಯೇ, ಕಾರಣಗಳೇನು;

ಈ) ಎಷ್ಟು ನಿವೇಶನ, ಜಮೀನುಗಳನ್ನು ಮಾರಾಟ ಮಾಡಲಾಗಿದೆ, ಮಾರಾಟದಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ, ಇದರಲ್ಲಿ ಭಾಗಿಯಾದವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ;

ಉ) ನಷ್ಟದಲ್ಲಿರುವ ಈ ಕಾರ್ಖಾನೆಗೆ ಅಧ್ಯಕ್ಷರನ್ನು ನೇಮಕ ಮಾಡಿರುವುದು ನಿಜವೇ, ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ತಗಲುವ ಖರ್ಚು ಎಷ್ಟು;

ಊ) ನೌಕರರಿಗೆ ಸರಿಯಾದ ಸಮಯಕ್ಕೆ ವೇತನ ನೀಡುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಇದಕ್ಕೆ ಕಾರಣಗಳೇನು? (ವಿವರ ನೀಡುವುದು)

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :—

ಅ) ಹೌದು. ಸರ್ಕಾರಿ ಆದೇಶ ಸಂಖ್ಯೆ: ಕೈಇ 28 ಕೈಇಎಲ್ 2000 (ಬಯಸಿ-ಭಾಗ-2) ಎ: 31-3-2001ರಂತೆ ಎನ್.ಜಿ.ಇ.ಎಫ್ ಸಂಸ್ಥೆಯನ್ನು ಖಾಸಗೀಕರಣಗೊಳಿಸಲು ಉದ್ದೇಶಿಸಿದೆ.

ಆ) ಹಾಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರು 2343 ಈಗಾಗಲೇ ಸ್ವಯಂ ನಿವೃತ್ತಿ ಪಡೆದಿರುವ ಕಾರ್ಮಿಕರು 2778

ಇ) ಹೌದು. ಎ.ಐ.ಎಫ್.ಆರ್.ನ ಪುನರ್ಶೀಲನ ಯೋಜನೆ ಆದೇಶದ ಮೇರೆಗೆ ಕಂಪನಿಗೆ ಸಂಬಂಧಪಟ್ಟ ನಿವೇಶನ ಹಾಗೂ ಜಮೀನುಗಳನ್ನು ಮಾರಾಟ ಮಾಡಲಾಯಿತು.

ಈ) 10 ಖಾಲಿ ನಿವೇಶನಗಳು, ಇಂದಿರಾನಗರದಲ್ಲಿರುವ 84 ಮನೆಗಳು ಮತ್ತು 46.4 ಎಕರೆ ಜಮೀನನ್ನು ಮಾರಾಟ ಮಾಡಲಾಗಿದೆ. ಈ ಎಲ್ಲಾ ಮಾರಾಟವು

ನಿಯಮಾನುಸಾರ ನಡೆದಿದ್ದು, ಸಕ್ಷಮ ಪ್ರಾಧಿಕಾರದ ಅನುಮತಿ ಮತ್ತು ಒಪ್ಪಿಗೆಯನ್ನು ಮುಂಚಿತವಾಗಿಯೇ ಪಡೆಯಲಾಗಿದೆ.

ಊ) ಹೌದು. ಇದರಿಂದ ಸರ್ಕಾರಕ್ಕೆ ತಗಲುವ ಅಂದಾಜುವೆಚ್ಚ ಮಾಸಿಕ ರೂ.91,000-00ಗಳು

ಋ) ನೌಕರರಿಗೆ ವೇತನ ನೀಡುವಲ್ಲಿ ಯಾವುದೇ ವಿಳಂಬವಾಗುತ್ತಿಲ್ಲ.

ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರಿಗೆ ವೈಯಕ್ತಿಕ ಕೊಳವೆ ಬಾವಿ.

1219(1433) ಶ್ರೀ ಬನ್ನಿಕೋಡ್ ಬಿ.ಹೆಚ್. (ಹಿರೇಕೆರೂರು) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಆರ್ಥಿಕ ಅಭಿವೃದ್ಧಿಗೆ ವೈಯಕ್ತಿಕ ನೀರಾವರಿ ಕೊಳವೆ ಬಾವಿಗಳ ಯೋಜನೆಯ ಬಗ್ಗೆ ಸರ್ಕಾರದ ನೀತಿ ಮತ್ತು ಕ್ರಮಗಳೇನು?

2. 2000-01 ಮತ್ತು 2001-02ನೇ ಸಾಲಿನಲ್ಲಿ ಈ ಯೋಜನೆಯ ಹಿರೇಕೆರೂರು ಮತಕ್ಷೇತ್ರದ ಫಲಾನುಭವಿಗಳ ಆಯ್ಕೆ ಮಾಡಲಾಗಿದೆಯೇ? (ಜಿಲ್ಲಾವಾರು ತಾಲ್ಲೂಕುವಾರು ವಿವರ ನೀಡುವುದು)

3. ಈ ಯೋಜನೆಗೆ ತಗಲುವ ವೆಚ್ಚವೆಷ್ಟು? ಆದ ವೆಚ್ಚವೆಷ್ಟು?

4. ಈ ಯೋಜನೆಯನ್ನು ಜಾರ್ಯಗತಗೊಳಿಸುವ ಬಗ್ಗೆ ಸರ್ಕಾರದ ನೀತಿ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

1. ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು 2ಎನಲ್ಲಿ ಬರುವ ಸಣ್ಣ ಮತ್ತು ಅತಿಸಣ್ಣ ರೈತರ ಜಮೀನುಗಳಿಗೆ ವೈಯಕ್ತಿಕ ನೀರಾವರಿ ಯೋಜನೆಯಲ್ಲಿ, ಘಟಕ ವೆಚ್ಚ 65,000-00 ರೂ.ಗಳ ಗರಿಷ್ಠ ಮಿತಿಯೊಳಗೆ ಕೊಳವೆ ಬಾವಿ ಕೊರೆದು ಪಂಪ್‌ಸೆಟ್ ಮತ್ತು ಇತರ ಸಾಮಗ್ರಿಗಳನ್ನು ಅಳವಡಿಸಲಾಗುವುದು. ಪ್ರತಿ ವಿಧಾನಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿರುವ ಸಮಿತಿಯು ಅರ್ಹ ಫಲಾನುಭವಿಗಳನ್ನು ಗುರುತಿಸಿ ಆಯ್ಕೆ ಮಾಡಿ ನಿಗಮಕ್ಕೆ ಶಿಫಾರಸ್ಸು ಮಾಡುತ್ತದೆ. ವೈಯಕ್ತಿಕ ಕೊಳವೆ ಬಾವಿ ಯೋಜನೆಗೆ ಘಟಕ ವೆಚ್ಚ ರೂ. 65,000-00 ಪೂರ್ಣ ಅನುದಾನವಾಗಿರುತ್ತದೆ. ವೈಯಕ್ತಿಕ ನೀರಾವರಿ ಯೋಜನೆಯಲ್ಲಿ ವಿದ್ಯುದ್ದೀಕರಣ ಮತ್ತು ಕೆ.ಪಿ.ಟಿ.ಸಿ.ಎಲ್ ಡಿಪಾಜಿಟ್ ವೆಚ್ಚವನ್ನು ಫಲಾನುಭವಿಗಳೇ ಭರಿಸಬೇಕು.